# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 180

ಸದಸ್ಯರ ಹೆಸರು : ಶ್ರೀ. ಎಸ್.ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು.

ಉತ್ತರಿಸುವ ದಿನಾಂಕ : 05.12.2023

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಡಿಕೆ ಬೆಳೆಗಳಲ್ಲಿ ಎಲೆಚುಕ್ಕೆ ರೋಗ ಕೊಳೆರೋಗ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಈ ರೋಗವನ್ನು ನಿಯಂತ್ರಣ ಮಾಡಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; | ಅಡಿಕೆ ಎಲೆಚುಕ್ಕೆ ಹಾಗೂ ಕೊಳೆ ರೋಗವನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿವೆ.<br>1. 2023-24ನೇ ಸಾಲಿನಲ್ಲಿ ಅಡಿಕೆ ಎಲೆಚುಕ್ಕೆ ರೋಗ ಭಾದಿತ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.4000.00 ಗಳಂತೆ 1.5 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಪ್ರತಿ ಫಲಾನುಭವಿಗೆ ಗರಿಷ್ಠ ರೂ.6000/- ಗಳ ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 6250 ಹೆಕ್ಟೇರ್ ಪ್ರದೇಶಕ್ಕೆ ರೂ.250.00 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ.<br>2. ಅಡಿಕೆ ಕೊಳೆ ರೋಗದ ನಿಯಂತ್ರಣಕ್ಕಾಗಿ ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ ಉಪ ಕಾರ್ಯಕ್ರಮವಾದ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆ ಘಟಕದಡಿ ಪ್ರತಿ ಹೆಕ್ಟೇರ್ ಗೆ ರೂ.1200 ರಂತೆ 4 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ.<br>3. ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣೆ ಕುರಿತು ಸಂಶೋಧನೆ ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ ರೂ.43.61 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.<br>4. ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಳೆಯ ಕಟಾವು ಹಾಗೂ ಸಿಂಪರಣೆಗಾಗಿ (ದೋಟಿ) ಖರೀದಿಸಲು ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದರವರಿಗೆ ಶೇ.40 ರಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ.50 ರಂತೆ ಸಹಾಯಧನ |

<table>
<tr><td></td><td></td><td>ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 1201 ಫಲಾನುಭವಿಗಳಿಗೆ ಈವರೆಗೂ ರೂ.366.68 ಲಕ್ಷಗಳ ಸಹಾಯಧನ ನೀಡಲಾಗಿದೆ.<br>5. ಎಲೆಚುಕ್ಕೆ ರೋಗವು ಪ್ರಮುಖ ಅಡಿಕೆ ಬೆಳೆಯುವ ಜಿಲ್ಲೆಗಳಲ್ಲಿ ಒಟ್ಟು 53977 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿರುವುದನ್ನು ಅಂದಾಜಿಸಲಾಗಿದ್ದು, ಅದರ ನಿಯಂತ್ರಣ ಹಾಗೂ ಸಂಶೋಧನೆಗಾಗಿ ರೂ.21.50 ಕೋಟಿಗಳ ಅನುದಾನದ ಅವಶ್ಯಕತೆಯಿದ್ದು, ಹೆಚ್ಚುವರಿ ಅನುದಾನಕ್ಕಾಗಿ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.<br>6. ಅಡಿಕೆ ಎಲೆಚುಕ್ಕೆ ರೋಗ ನಿಯಂತ್ರಣ ಕುರಿತು ವಿಶ್ವವಿದ್ಯಾನಿಯಲದ ತಜ್ಞರ ಸಹಯೋಗದೊಂದಿಗೆ ತರಬೇತಿ, ಕಾರ್ಯಗಾರಗಳು ಹಾಗೂ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸುವುದರ ಮೂಲಕ ಅರಿವು ಮೂಡಿಸಲಾಗುತ್ತಿದೆ.</td></tr>
<tr><td>ಇ)</td><td>ಈ ರೋಗಕ್ಕೆ ತುತ್ತಾಗಿ ತೋಟಗಳು ನಾಶವಾಗಿದ್ದು, ನಾಶವಾದ ತೋಟಗಳಿಗೆ ಪರಿಹಾರವನ್ನು ನೀಡಲಾಗುತ್ತಿದೆಯೇ: (ವಿವರ ಒದಗಿಸುವುದು)</td><td>ಅಡಿಕೆ ಬೆಳೆ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾದ ಸಂದರ್ಭದಲ್ಲಿ NDRF/SDRF ಮಾರ್ಗಸೂಚಿಗಳನ್ವಯ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.28,000/-ಗಳಂತೆ 2 ಹೆಕ್ಟೇರ್‌ಗಳಿಗೆ ಕಂದಾಯ ಇಲಾಖೆಯಿಂದ ಪರಿಹಾರ ನೀಡಲಾಗುತ್ತಿದೆ. 2022-23 ನೇ ಸಾಲಿನಲ್ಲಿ ಒಟ್ಟು 10750.71 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದ್ದು, ವಿವರ ಕೆಳಕಂಡಂತಿದೆ
<table>
<tr><th>ಕ್ರ.ಸಂ.</th><th>ಜಿಲ್ಲೆ</th><th>ಹಾನಿಗೊಳಗಾದ ವಿಸ್ತೀರ್ಣ(ಹೆ)</th></tr>
<tr><td>1</td><td>ಚಿಕ್ಕಮಗಳೂರು</td><td>9820.86</td></tr>
<tr><td>2</td><td>ಚಿತ್ರದುರ್ಗ</td><td>202.19</td></tr>
<tr><td>3</td><td>ಹಾಸನ</td><td>134.01</td></tr>
<tr><td>4</td><td>ದಾವಣಗೆರೆ</td><td>292.80</td></tr>
<tr><td>5</td><td>ತುಮಕೂರು</td><td>66.97</td></tr>
<tr><td>6</td><td>ಮಂಡ್ಯ</td><td>56.23</td></tr>
<tr><td>7</td><td>ಶಿವಮೊಗ್ಗ</td><td>46.96</td></tr>
<tr><td>8</td><td>ಕೊಡಗು</td><td>40.00</td></tr>
<tr><td>9</td><td>ಉಡುಪಿ</td><td>10.65</td></tr>
<tr><td>10</td><td>ಉತ್ತರ ಕನ್ನಡ</td><td>13.09</td></tr>
<tr><td>11</td><td>ರಾಮನಗರ</td><td>19.60</td></tr>
<tr><td>12</td><td>ಹಾವೇರಿ</td><td>28.00</td></tr>
<tr><td>13</td><td>ಇತರೆ</td><td>19.35</td></tr>
<tr><td></td><td>ಒಟ್ಟು</td><td>10750.71</td></tr>
</table></td></tr>
<tr><td>ಈ)</td><td>ಈ ರೋಗಕ್ಕೆ ತುತ್ತಾದ ತೋಟಗಳಿಗೆ ತೋಟಗಾರಿಕೆ ಇಲಾಖೆಯಿಂದ ಉಚಿತವಾಗಿ ಯಾವ ಔಷಧಿಗಳನ್ನು ರೈತರಿಗೆ ನೀಡಲಾಗುತ್ತಿದೆ;</td><td>ಇಲಾಖೆಯಿಂದ ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣಕ್ಕಾಗಿ ಹೆಕ್ಸಾಕೊನೊಜೋಲ್ ಮತ್ತು ಪ್ರೋಪಿಕೊನೊಜೋಲ್ ಸಸ್ಯ ಸಂರಕ್ಷಣಾ ಔಷಧಿಗಳನ್ನು ತಜ್ಞರ ಶಿಫಾರಸ್ಸಿನ ಅನ್ವಯ ಹಾನಿಯಾದ ಪ್ರದೇಶ ರೈತರಿಗೆ ವಿತರಿಸಲಾಗುತ್ತಿದೆ.</td></tr>
</table>

| | | |
|---|---|---|
| ಉ) | ಈ ರೋಗಕ್ಕೆ ತುತ್ತಾದ ತೋಟಗಳಿಗೆ ಇಲಾಖೆಯಿಂದ ಸಿಗುತ್ತಿರುವ ಮಾರ್ಗದರ್ಶನ ಹಾಗೂ ಔಷಧಿಗಳೇನು: ಜಿಲ್ಲಾವಾರು ಬೆಳೆಹಾನಿ ವಿವರ ಮತ್ತು ಎಷ್ಟು ಪರಿಹಾರ ಕೊಡಲಾಗಿದೆ? (ವಿವರವನ್ನು ನೀಡುವುದು) | ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣಕ್ಕಾಗಿ ಇಲಾಖಾ ವತಿಯಿಂದ ಮಾರ್ಗದರ್ಶನ ಹಾಗೂ ಔಷಧಿಗಳ ಕುರಿತು ಕ್ರಮ ಸಂಖ್ಯೆ (ಅ), (ಇ) ಮತ್ತು (ಈ)ಗಳಲ್ಲಿನ ಉತ್ತರದಲ್ಲಿ ವಿವರಿಸಲಾಗಿದೆ. |

HORTI 423 HGM 2023

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು